(ಇಂದು ದಿನಾಂಕ 09-09-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಚ್.ಎಸ್.ಎಸ್. ವಕೀಲರಿಂದಃ**

ನಾನು ಡೈರೆಕ್ಟರ್ ಕ್ರಿಮ್ಸ್ ಇವರಿಗೆ ನನ್ನ ಮುಖ್ಯವಿಚಾರಣೆಯ 2 ಪ್ಯಾರಾದಲ್ಲಿ ಆದ ವಿಷಯಗಳ ಬಗ್ಗೆ ಮಾಹಿತಿ ಕೊಟ್ಟಿದ್ದೆ. ಅವರು ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲು ತಿಳಿಸಿದ್ದರು. ಡೈರೆಕ್ಟರ್ ಕ್ರಿಮ್ಸ್ ಇವರಿಗೆ ಮೌಖಿಕವಾಗಿ ತಿಳಿಸಿದ್ದೆ. ಸರಕಾರಿ ಆಸ್ಪತ್ರೆ ಆವರಣದ ಒಳಗಡೆ ಯಾವುದಾದರೂ activity ಆದರೆ ಅದರ ಬಗ್ಗೆ ಡೈರೆಕ್ಟರ್ ಕ್ರಿಮ್ಸ್ ಇವರು ಕ್ರಮ ತೆಗೆದುಕೊಳ್ಳಬಹುದು ಎಂದರೆ ಸರಿ. ಅವರು ನನಗೆ ದೂರು ಕೊಡಲು ಹೇಳಿದ್ದರು. ಡೈರೆಕ್ಟರ್ ಕ್ರಿಮ್ಸ್ ಇವರು ಖುದ್ದಾಗಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಮುಖ್ಯ ವಿಚಾರಣೆಯ ಪ್ಯಾರಾ ನಂ.3 ಪುಟ ನಂ.3 ರಲ್ಲಿ ಹೇಳಿದ ಘಟನೆ ಮಾರ್ಚ 2020 ರಲ್ಲಿ ಆಗಿತ್ತು. ಅದರ ಬಗ್ಗೆ ಡೈರೆಕ್ಟರ್ ಕ್ರಿಮ್ಸ್ ಇವರಿಗೆ ಮೌಖಿಕವಾಗಿ ತಿಳಿಸಿದ್ದೆ. ಬರವಣಿಗೆಯಲ್ಲಿ ಕೊಟ್ಟಿಲ್ಲ. ಆ ದಿನ ನಾನಾಗಲೀ ಡೈರೆಕ್ಟರ್ ಕ್ರಿಮ್ಸ್ ನವರಾಗಲೀ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಇನ್ನೊಂದು ಬಾರಿ ಬಂದರೆ ನೋಡುವಾ ಎಂದು ಡೈರೆಕ್ಟರ್ ಕ್ರಿಮ್ಸ್ ರವರು ಹೇಳಿದ್ದರು ಎನ್ನುವರು. 1 ನೇ ಆರೋಪಿ ಯಾವುದೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗದೇ ಇದ್ದರೂ ಸಹ ಅವರಿಗೆ ಮಾನ ಹಾನಿ ಮಾಡುವ ಉದ್ದೇಶದಿಂದ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣ ಉದ್ದೇಶಪೂರ್ವಕವಾಗಿ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 300 - 400 ಜನ ವಿಡಿಯೋ ನೋಡಿರುವ ಬಗ್ಗೆ ಸಾಕ್ಷಿ ಪುರಾವೆ ಕೊಟ್ಟಿರುತ್ತೇನೆ. ದಿನಾಂಕ 03-07-2019 ರ ಕರಾವಳಿ ಮುಂಜಾವು ದಿನಪತ್ರಿಕೆಯಲ್ಲಿ "ನಾನು ಹಣ ತೆಗೆದುಕೊಂಡು ಶಸ್ತ್ರಚಿಕಿತ್ಸೆ ಮಾಡಿಸಿರುತ್ತೇನೆ"ಎಂದು ಪ್ರಕಟಣೆ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಅದು ಸುಳ್ಳು ಪ್ರಕಟಣೆ ಎನ್ನುವರು. ಕರಾವಳಿ ಮುಂಜಾವು ದಿನಪತ್ರಿಕೆ ದಿನಕ್ಕೆ ಸುಮಾರು 40,000 ಪ್ರತಿಗಳನ್ನು ಪ್ರಿಂಟ್ ಮತ್ತು ಮಾರಾಟ ಮಾಡುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 03-07-2019 ರ ಪತ್ರಿಕೆ ಪ್ರಕಟಣೆಗೆ ಸಂಬಂಧಿಸಿ ನಾನು ಯಾವುದೇ ವಕೀಲರ ಮೂಲಕ ನೋಟಿಸ್ ಕಳುಹಿಸಿರುವುದಿಲ್ಲ. ದಿನಾಂಕಃ

03-07-2019 ರ ಪ್ರಕಟಣೆ ಬಂದ ನಂತರ ನನ್ನ ಸಂಬಂಧಿಕರು, ಮಿತ್ರರು ನನ್ನ ಬಳಿ ವಿಚಾರಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಅವರು ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ ನೀವು ಒಳ್ಳೆಯವರು ಎಂದು ಹೇಳಿದ್ದರು ಎನ್ನುವರು. ವಿಡಿಯೋ ಮೂಲಕ ಬಂದ ಪ್ರಕಟಣೆಗೆ ಆ ರೀತಿ ತಲೆಕೆಡಿಸಿಕೊಳ್ಳಬೇಡಿ ಎಂದು ಹೇಳಿರುವುದಿಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿ ಅದರಲ್ಲಿ ಭ್ರಷ್ಟ ಎಂದು ಹೇಳಿದ್ದರಿಂದ ಜನ ನಂಬಿದ್ದರು ಎನ್ನುವರು. ನಾನು ಮೆಡಿಕಲ್ ಸುಪರಿಂಟೆಂಡೆಂಟ್ ಆಗಿ ಕೆಲಸ ಮಾಡಿದ್ದು ಅದಕ್ಕೆ ಪ್ರೊಫೆಸರ್ ಆಗಿರಬೇಕು ಎಂಬ ಪ್ರಶ್ನೆಗೆ ಸಾಕ್ಷಿ 2019 ರಲ್ಲಿ ಆ ರೂಲ್ಸ್ ಇರಲಿಲ್ಲ ಎನ್ನುವರು. ಈಗ ಬದಲಾವಣೆಯಾಗಿದೆ ಎನ್ನುವರು. ನಾನು ಪ್ರೊಫೆಸರ್ ಅಲ್ಲ ಎಂದರೆ ಸರಿ. 5 ವರ್ಷ ಶಿಕ್ಷಣ ಕಲಿಸುವ ಅನುಭವ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಕಾಲೇಜ್ ಪ್ರಾರಂಭ ಆದಾಗಿನಿಂದ ಪಾಠ ಮಾಡುತ್ತಿದ್ದೇನೆ ಎನ್ನುವರು. 2 ಮತ್ತು 3 ನೇ ಆರೋಪಿತರು ಸೆಕ್ಯುರಿಟಿ ಬಟ್ಟೆ ಧರಿಸಿ ಹೋಗುತ್ತಿದ್ದರು ಎಂಬ ಬಗ್ಗೆ RMO ರವರು ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ. ಗೀತಾ ಬಾನಾವಳಿ ಅವರ ಪ್ರಕರಣ ಆದ ನಂತರ ನನ್ನ ಬಗ್ಗೆ ಬಹಳಷ್ಟು ಆರೋಪಗಳು ಹೊರಗೆ ಬಂದಿದ್ದು ನಾನು ಭ್ರಷ್ಟ ಅಧಿಕಾರಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಗೀತಾ ಬಾನಾವಳಿ ಇವರ ಗಂಡ ಹಣ ಪಡೆದು ಕೇಸ ವಾಪಸ್ ಪಡೆದುಕೊಳ್ಳಿ ಎಂದು ನಾನು ಹೇಳಿದ್ದೆ ಎಂದು ಆರೋಪಿಸಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ಪತ್ರಿಕೆಗಳಲ್ಲಿ ನಿಜ ಸಂಗತಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಯಾವುದಾದರೂ ಅಧಿಕಾರಿ ನಿಯಮಗಳ ಪ್ರಕಾರ ಕೆಲಸ ಮಾಡದೇ ಇದ್ದರೆ ಅದರ ಬಗ್ಗೆ ಪ್ರಕಟಿಸುವುದು ಮಾನಹಾನಿ ಆಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ